**ಪ್ರಮಾಣೀಕರಿಸಲಾದ ದಿನಾಂಕ : 25.10.2025.**

**<u>ವಾಟೀ ಸವಾಲು : ಆರೋಪಿ ಪರ ಶ್ರೀ. T.K.R ವಕೀಲರಿಂದ</u> :-**

ಸಾಕ್ಷಿಗೆ ದಿನಾಂಕಃ 26-08-2021 ರ ಚೆಕ್ಕು ನೋಂದಣಿ ಸಂಖ್ಯೆಃ 287250 ನ ಚೆಕ್ಕಿನ ದೃಢೀಕೃತ ನಕಲನ್ನು ತೋರಿಸಲಾಗಿ ಸದರಿ ಚೆಕ್ಕಿನ ಮೇಲಿರುವ ಸಹಿ ತೋರಿಸಲಾಗಿ ತನ್ನದೇ ಎಂದು ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು ನಿಡಿ-8 ಎಂದು ಗುರುತಿಸಲಾಯಿತು. ಸಾಕ್ಷಿಗೆ CC No.5508/2021 ರಲ್ಲಿ ಸಲ್ಲಿಸಿದ ವಕಾಲತ್ತಿನ ದೃಢೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದೇ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು ನಿಡಿ-9 ಎಂದು ಗುರುತಿಸಲಾಯಿತು. ಸದರಿ ನಿಡಿ-8 ಚೆಕ್ಕನ್ನು ನಾನು ಗುರುಕುಲ ಕೋ ಆಪರೇಟೀವ್ ಸೊಸೈಟಿಗೆ ಕೊಟ್ಟಿದ್ದು ಸದರಿ ಚೆಕ್ಕು ಬೌನ್ಸ್ ಆದ ಕಾರಣ CC.No.5508/2021 ರಂತೆ ಕೇಸು ದಾಖಲು ಮಾಡಿದ್ದು ಸದರಿಸಿ ಕೇಸಿನಲ್ಲಿ ನಿಡಿ-1 ರಂತೆ ನಾನು ವಕಾಲತ್ತನ್ನು ತಯಾರಿಸಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ CC.No.5508/2021 ರಲ್ಲಿನ order sheet ನ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಅದನ್ನು  ನೋಡಿ ಒಪ್ಪಿ ದ್ದರಿಂದ ಸದರಿ ದಾಖಲಾತಿಯನ್ನು ನಿಡಿ-10 ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿನಾಂಕಃ- 18.09.2021 ರಂದು ಸಾಕ್ಷಿಗೆ ಬಂದ ಲೀಗಲ್ ನೋಟೀಸಿನ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲಾತಿಯನ್ನು ನಿಡಿ-11 ಎಂದು ಗುರುತಿಸಲಾಯಿತು. ಸದರಿ ಪ್ರಕರಣವು ಈಗಲೂ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ನನ್ನ ಸ್ನೇಹಿತನಿಗೆ ಗುರುಮಲ್ಲಿಕಾರ್ಜುನಸ್ವಾಮಿ ಸೊಸೈಟಿಯಲ್ಲಿ ಸಾಲವನ್ನು ಕೊಡಿಸಿದ್ದು ಆ ಸಂಬಂಧ ಸದರಿ ಪ್ರಕರಣ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ.

ಚಿಕ್ಕಮಗಳೂರಿನಲ್ಲಿರುವ ನನ್ನ ಭಾವ ಗೊತ್ತಿಲ್ಲ. ಅವರು ಯಾವ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಯಾವ ಡಾಬಾವನ್ನು ಇಟ್ಟುಕೊಂಡಿರುವುದಿಲ್ಲ. ಆರೋಪಿತನು ನನ್ನ ಡಾಬಾಗೆ ಚಿಕನ್ ನ್ನು supply ಮಾಡುತ್ತಿದ್ದು ಆಗಾಗ ನನ್ನ ಡಾಬಾಗೆ ಬರುತ್ತಿದ್ದನು. ಆಗ ಆತನು ನನ್ನ ಭಾವನೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದನು. ಅವರ ನಡುವೆ ಏನು ವ್ಯವಹಾರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ಭಾವನಾದ ಮಂಜುನಾಥ್ ಹಾಗೂ ನಾನು ವಿಶ್ವಾಸದಿಂದ ಇದ್ದೇನೆ ಎಂದರೆ ಸರಿಯಲ್ಲ.

ನನ್ನ ಮಾವ ಆರೋಪಿತನ ವಿರುದ್ಧ ಚಿಕ್ಕಮಗಳೂರು ನ್ಯಾಯಾಲಯದಲ್ಲಿ CC NO.297/2019 ರಲ್ಲಿ ದಾಖಲು ಮಾಡಿರುವ ಪ್ರಕರಣಕ್ಕೆ ನಾನೇ ನೇರವಾಗಿ ಹೊಣೆಯಾಗಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ CC NO.297/2019 ರಲ್ಲಿ ದಾಖಲು ಮಾಡಿದ ರಾಜೀ ಮೆಮೋವನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುವುದಿಲ್ಲ. ರಾಜೀ ಪತ್ರದಲ್ಲಿ ಈ ನ್ಯಾಯಾಲಯದ

ಮುಂದೆ ನಡೆಯುತ್ತಿರುವ ಈ ಪ್ರಕರಣವನ್ನು ಸೇರಿಸಿಕೊಂಡು ರೂ.1,50,000/- ಗಳನ್ನು ಪಡೆದು ವಾಪಾಸ್ ಪಡೆಯುತ್ತೇನೆ ಎಂದು ನನ್ನ ಭಾವ ಬರೆದು ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕಃ-22.01.2021 ರಂದು ರಾಜೀ ಪತ್ರವನ್ನು ಹಾಕುವ ಹಿಂದಿನ ದಿನ ನಾನು ಕೂಡ ಚಿಕ್ಕಮಗಳೂರಿಗೆ ಹೋಗಿ ನನ್ನ ಭಾವ ಮತ್ತು ಆರೋಪಿತನೊಂದಿಗೆ ಕುಳಿತು ರಾಜೀ ಮಾತುಕತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ರಾಜೀಯು ನನ್ನ ಮಾರ್ಗದರ್ಶನದಲ್ಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಾಸ್ತವಿಕತೆ ತಿಳಿದಿದ್ದರೂ ಸಹ ಆರೋಪಿತನಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ಆತನ ವಿರುದ್ಧ ದಾಖಲು ಮಾಡಿ ಈ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಾಜೀ ಪತ್ರವಾದ ನಂತರ ಕಂತಿನ ಪ್ರಕಾರ ಆರೋಪಿತನಿಂದ ನಾನು ಹಾಗೂ ನನ್ನ ಭಾವ ಪೂರ್ತಿ ಹಣವನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತನು ಸದರಿ ರಾಜೀ ಅರ್ಜಿಯನ್ನು ದಾಖಲು ಮಾಡಿದ ನನ್ನ ಭಾವನನ್ನು ಸಾಕ್ಷಿ ಹೇಳಲು ಕರೆಯಲು ಅರ್ಜಿಯನ್ನು ಸಲ್ಲಿಸಿದರೆ ನಿಮ್ಮ ಆಕ್ಷೇಪಣೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹೇಳಿರುವಂತೆ ಆರೋಪಿತನು ನನಗೆ ಯಾವುದೇ ಹಣವನ್ನು ಕೊಡುವ ಬಾಧ್ಯತೆಯನ್ನು ಹೊಂದಿರುವುದಿಲ್ಲ. ಆತನಿಂದ ಈಗಾಗಲೇ ನಾನು ಮೇಲೆ ಹೇಳಿದ ರಾಜಿ ಪತ್ರದ ಪ್ರಕಾರ ರೂ.1,50,000/- ಹಣವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನಿಗೆ ರೂ.2,50,000/- ಹಣವನ್ನು ಆರೋಪಿತನಿಗೆ ಕೊಡಲು 2014 ನೇ ಇಸವಿಯಲ್ಲಿ ನನಗೆ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**